ಫಾರೆಸ್ಟ್.

ಇಸಿ ಹಾರ್‌ನಾಮಾ.

ತಾರೀಖು 13ನೆ ನವಂಬರ್ 1903.

ನಂ. 315—3339, ಸನ್ 1900ನೆ ಇಸವಿಯ XIನೆ ನಂಬರ್ ಮೈಸೂರು ಸೀಮೆಯ ಫಾರೆಸ್ಟ್ ರೆಗ್ಯುಲೇಷನ್ 4ನೆ ಸೆ
ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂ
ಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ವಂಟೆ ಫಾರೆಸ್ಟಾಗಿ ಏರ್ಪ
ದ್ದೆಂದು ಯೋಚಿಸಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬ್ಳಿ ಅಥವಾ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಯಾಕಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಶಿವಮೊಗ್ಗ.	ಶಿಕಾರಿಪುರ ತಾಲ್ಲೂಕು.	5.4 ಚದರ ಮೈಲಿಗಳು.	ಮೂರಕಂಜೆ.	ಸ್ಥಳ.—ಶಿವಮೊಗ್ಗ–ಶಿಕಾರಿಪುರ ರಸ್ತೆಯ ಎಡಕ್ಕೆ ಇರುವ ಡಿಸ್ಟ್ರಿಕ್ಟು ಜಂಗಲು ಯರಕಟ್ಟೆ, ಹಾರೋಕೊಪ್ಪ, ಕೆಸ್ಸರಕಟ್ಟೆ, ಚಿಕ್ಕೇರ್ಲಹಳ್ಳಿ, ಮತ್ತಿಗಟ್ಟ, ಚು ರ್ಚಗುಂಡಿ, ದೊಡ್ಡ ಜೋಗಿಹಳ್ಳಿ ಮತ್ತು ತರ್ಲಗಟ್ಟ ಈ ಗ್ರಾಮಗಳಿಂದ ಸುತ್ತಲ್ಪಟ್ಟಿರುತ್ತದೆ. **ಚಕ್ಕುಬಂದಿ.** ಉತ್ತರಕ್ಕೆ.—ತರ್ಲಗಟ್ಟ ವ ಯರೆಕಟ್ಟೆ ಇವುಗಳ ಎಲ್ಲೆ ಬಾಂದುಗಳಿಂದ ಯರೆಕ ಟ್ಟೆ ವ ಹಾರೋಕೊಪ್ಪ ಇವುಗಳ ಎಲ್ಲೆ ಬಾಂದುಗಳ ವಂವಿಗೆ ಶಿಕಾರಿಪುರ–ಶಿವ ಮೊಗ್ಗ ರಸ್ತೆ. ಪೂರ್ವಕ್ಕೆ.—ಆಮೇಲೆ ನೈರುತ್ಯದಿಕ್ಕಾಗಿ ಹಾರೋಕೊಪ್ಪದ ಸರ್ವೆ ನಂ. 44ರ ಮ ಧ್ಯೆ ಹಾರೋಕೊಪ್ಪದ ಸರ್ವೆ ನಂ. 44 ಮತ್ತು ಕೆಸ್ಸರಕಟ್ಟೆಯ ಸರ್ವೆ ನಂ. 16, 17 ವ 21 ಇವುಗಳ ಬಾಂದುಗಳು ಮುಟ್ಟುವ ಸ್ಥಳಕ್ಕೆ ಹೋಗುತ್ತ ದೆ. ತರುವಾಯ ನೈರುತ್ಯದಿಕ್ಕಾಗಿ ಕೆಸ್ಸರಕಟ್ಟೆಯ ಸರ್ವೆ ನಂ. 16ರ ಮ ಧ್ಯೆ ಅದೇ ಗ್ರಾಮದ ಸರ್ವೆ ನಂ. 15ರ ವಾಯುವ್ಯ ಮೂಲೆಗೆ ಹೋಗುತ್ತ ದೆ. ಆಮೇಲೆ ದಕ್ಷಿಣದಿಕ್ಕಾಗಿ ಕೆಸ್ಸರಕಟ್ಟೆಯ ಸರ್ವೆ ನಂ. 16 ರಗೂ ಮತ್ತು ಚಿಕ್ಕೇರ್ಲಹಳ್ಳಿಯ ಸರ್ವೆ ನಂ. 1ಕ್ಕೂ ಮಧ್ಯೆ ಇರುವ ಎಲ್ಲೆ ಲೈನಿನ ಮಧ್ಯಭಾಗವಾದ 1ನೆ ನಂಬರ್ ಕಲ್ಲುಪ್ಪೆಗೆ ಹೋಗುತ್ತದೆ. ತರುವಾಯ ನೈರುತ್ಯದಿಕ್ಕಾಗಿ ಚಿಕ್ಕೇರ್ಲಹಳ್ಳಿಯ ಸರ್ವೆ ನಂ. 1ರ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 35ರ ವಾಯುವ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ವಾಯುವ್ಯದಿಕ್ಕಾಗಿ ಚಿಕ್ಕೇರ್ಲಹಳ್ಳಿಯ ಸರ್ವೆ ನಂ. 1 ಮ ತ್ತು ಮತ್ತಿಗಟ್ಟದ ಸರ್ವೆ ನಂ. 12 ಇವುಗಳ ಮಧ್ಯೆ ಸರ್ವೆ ನಂ. 21ರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಮತ್ತಿಗಟ್ಟದ ಸರ್ವೆ ನಂ. 20ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಗ್ರಾಮದ ಸರ್ವೆ ನಂ. 5ರ ಕೇವಲ ಪೂರ್ವಮೂಲೆಗೆ ಹೋಗುತ್ತದೆ. ತರುವಾಯ ಮತ್ತಿಗಟ್ಟ, ಕುಂದೂರು ವ ಮಾರ್ಕಂಡೆ ಇವುಗಳ ಎಲ್ಲೆ ಬಾಂದುಗಳು ಸೇರತಕ್ಕ ಅದೇ ಗ್ರಾ ಮದ ಸರ್ವೆ ನಂ. 11ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಮ ತ್ತಿಗಟ್ಟ ವ ಮಾರ್ಕಂಡೆಗೂ ಮತ್ತು ಮತ್ತಿಗಟ್ಟ ವ ಚುರ್ಚಗುಂಡಿಗೂ ಮಧ್ಯೆ ಇರುವ ಎಲ್ಲೆಯ ಉದ್ದಕ್ಕೂ ಮತ್ತಿಗಟ್ಟ, ಚುರ್ಚಗುಂಡಿ, ಸನ್ಯಾಸಿಕೊಪ್ಪ ವ ಹಿಟ್ಲ ಈ ಗ್ರಾಮಗಳ ಬಹುತ್ವದ ಎಲ್ಲೆ ಬಾಂದುಗಳಿಗೆ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ಚುರ್ಚಗುಂಡಿಯ ಸರ್ವೆ ನಂ. 25 ವ 24 ಇವುಗಳ ಮಧ್ಯೆ ಆಖೈರ ನಂಬರಿನ ಕೇವಲ ಉತ್ತರಮೂಲೆಗೆ ಹೋಗುತ್ತದೆ. ಆಮೇ ಲೆ ಈಶಾನ್ಯದಿಕ್ಕಾಗಿ ದೊಡ್ಡ ಜೋಗಿಹಳ್ಳಿಯ ಸರ್ವೆ ನಂ. 15ರ ಮಧ್ಯೆ ತರ್ಲ ಗಟ್ಟ, ಸುಟಭಂಡಿ ಮತ್ತು ದೊಡ್ಡ ಜೋಗಿಹಳ್ಳಿ ಇವುಗಳ ಬಹುತ್ವದ ಬಾಂ ದುಗಳಿಗೆ ಹೋಗುತ್ತದೆ. ತರುವಾಯ ತರ್ಲಗಟ್ಟ ವ ಸುಟಭಂಡಿಗೂ ಮತ್ತು ತರ್ಲಗಟ್ಟ ವ ಯರೆಕಟ್ಟೆಗೂ ಮಧ್ಯೆ ಇರುವ ಎಲ್ಲೆಯ ಉದ್ದಕ್ಕೂ ಶಿಕಾರಿ ಪುರ–ಶಿವಮೊಗ್ಗ ರಸ್ತೆಯಲ್ಲಿ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು, ಅಂತಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂತಾ ಜಮೀನಿನ ಯಾವ ಫಾರೆಸ್ಟು ಉತ್ಪ ತ್ತಿಗಾದರೂ ಯಾವ ಮನುಷ್ಯನಿಂದಾಗಲಿ ನವೂದಾಗುವ ಅಥವಾ ಅವನ ಪಕ್ಷವಾಗಿ ಇರುವುದಾಗಿ ಹೇಳಿಕೊಳ್ಳುವ ಯಾವ ಹಕ್ಕು ಗಳ ಇರುವಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತೀರ್ಮಾನಿಸಲು ಮತ್ತು ಮೇಲ್ಕಂಡ ರೆಗ್ಯುಲೇಷನಿನ IIನೆ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರವಾಗಿ ಅಮಲ್ ನಡಿಸಲು, ಫಾರೆಸ್ಟ್ ಅಸಿಸ್ಟೆಂಟ್ ಕಮಿಸರ್ವೇಟರಾದ ಮೆ|| ಬಿ. ರಾಮಸ್ವಾಮಿ ಆಯ್ಯರ್ ಯವರನ್ನು ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಾಗಿರಬೇಕೆಂದು ಮೊಕರರ್ರಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಿಗೆ ಸಹಾಯ ಮಾಡಲು ತತ್ಕಾಲದ ಶಿವಮೊಗ್ಗ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರು ಸರ್ಕಾರದ ತರ್ಫಿನಲ್ಲಿ ಹಾಜರು ಇರಬೇ ತಲೂ ಆಜ್ಞಾಪಿಸಿರುತ್ತಾರೆ.

3. ಮತ್ತು ಸದರೀ ರೆಗ್ಯುಷಲೇಷನಿನ 15ನೆ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆ ಯ ಶ್ರೀಮನ್ ಮಹಾರಾಜಾ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಸೆಕ್ಷನ್‌ಗಳಂತೆ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯತಕ್ಕ ರೆವಿನ್ಯೂ ಇಲಾಖೆಯ ಆಫಿಸರಾಗಿರಬೇಕೆಂದು ತತ್ಕಾಲದ ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮಿಷನರನ್ನು ಮೊಕರರ್ರಾಡಿರುತ್ತಾರೆ.

c

ತಾರೀಖು 13ನೆ ನವಂಬರು 1903.

ನಂ. 318—3342, ಸನ್1900ನೆ ಇಸವಿಯ XIನೆ ನಂಬರ್ ಮೈಸೂರ್ ಸೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದರಡಿ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ಪರಿಣಮಿಸಬೇಕೆಂದು ಯೋಚಿಸಿರುತ್ತೆ :—

ಷೆಡ್ಯೂಲ್.

ಜಿಲ್ಲೆಯ ಹೆಸರು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮದ ಹೆಸರು.	ಸುತ್ತಳತೆ ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಶಿವಮೊಗ್ಗ	ಶಿಕಾರಿಪುರ	2½ ಚದರ ಮೈಲಿಗಳು	ಗೊಗ್ಗ	

ಸ್ಥಳ.—ಧಾರವಾರ ಸರಹದ್ದಿಗೂ ಮತ್ತು ಶಿಕಾರಿಪುರ—ಹೊನ್ನಾಳಿ ರಸ್ತೆಗೂ ಮಧ್ಯೆ ಇರುವ ಶಿಸ್ಟ್ರಿಕ್ಟು ಜಂಗಲುಗಳು ದಬ್ಬ್ಕ ಬೈರನಹಳ್ಳಿ, ಮುರವಳ್ಳಿ, ಗೊಗ್ಗ, ಕೆಂಚಗೌಡನಕೊಪ್ಪ ಮತ್ತು ಬೇಗೂರು ಈ ಗ್ರಾಮಗಳಿಂದ ಸುತ್ತಲ್ಪಟ್ಟಿರುತ್ತವೆ.

ಚಕ್ಕುಬಂದಿ.

ಉತ್ತರಕ್ಕೆ.—ದಬ್ಬ್ಕ ಬೈರನಹಳ್ಳಿಯ ಸರ್ವೆ ನಂ. 83ರ ಪಶ್ಚಿಮ ಪಾರ್ಶ್ವದಲ್ಲಿ ಬೇಗೂರು ಅಗ್ರಹಾರ ವ ದಬ್ಬ್ಕ ಬೈರನಹಳ್ಳಿ ಇವುಗಳ ಎಲ್ಲೆ ಬಾಂದುಗಳಿಂದ ಹೊರಟು ಲೈನು ದಬ್ಬ್ಕ ಬೈರನಹಳ್ಳಿಯ ಸರ್ವೆ ನಂ. 83 ವ 81 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಈಶಾನ್ಯದಿಕ್ಕಾಗಿ ದಬ್ಬ್ಕ ಬೈರನಹಳ್ಳಿಯ ಸರ್ವೆ ನಂ. 59ರ ಮಧ್ಯೆ ದಬ್ಬ್ಕ ಬೈರನಹಳ್ಳಿ, ಮುರವಳ್ಳಿ ವ ಗೊಗ್ಗ ಈ ಗ್ರಾಮಗಳ ಮೂರು ಎಲ್ಲೆ ಬಾಂದುಗಳು ಸೇರತಕ್ಕ ಸ್ಥಳದ ಉತ್ತರಕ್ಕೆ ಸುಮಾರು 3½ ಫರ್ಲಾಂಗುಗಳಲ್ಲಿ ದಬ್ಬ್ಕ ಬೈರನಹಳ್ಳಿಗೂ ವ ಮುರವಳ್ಳಿಗೂ ಮಧ್ಯೆ ಇರುವ ಎಲ್ಲೆ ಲೈನಿನಲ್ಲಿ ಬಂದು ಸ್ಥಳಕ್ಕೆ ಹೋಗುತ್ತದೆ. ತರುವಾಯ ಆಗ್ನೇಯದಿಕ್ಕಾಗಿ ಮುರವಳ್ಳಿಯ ಸರ್ವೆ ನಂ. 151 ವ 85 ಇವುಗಳ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 87ರ ವಾಯುವ್ಯ ಮೂಲೆಗೆ ಹೋ

ಪೂರ್ವಕ್ಕೆ.—ತರುವಾಯ ಮುರವಳ್ಳಿಯ ಸರ್ವೆ ನಂ. 87ರ ಪಶ್ಚಿಮ ಉದ್ದಕ್ಕೂ ಅವರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ದಿಕ್ಕಾಗಿ ಕೆರೆಯಿ ಮಧ್ಯೆ (ಮುರವಳ್ಳಿಯ ಸರ್ವೆ ನಂ. 86) ಗೊಗ್ಗ ವ ಚಂಗೌಡನಾಯಕನಕೊಪ್ಪ ಇವುಗಳ ಮೂರು ಎಲ್ಲೆ ಬಾಂದುಗಳು ಸೇರುವ ಸ್ಥಳಕ್ಕೆ ಹೋಗುತ್ತದೆ. ತರುವಾಯ ನೈರುತ್ಯದಿಕ್ಕಾಗಿ ಗೊಗ್ಗ ನಂ. 201ರ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 194ರ ವಾಯುವ್ಯ ಮೂಲೆಗೆ ಹೋಗುತ್ತದೆ.

ದಕ್ಷಿಣಕ್ಕೆ.—ಆಮೇಲೆ ಗೊಗ್ಗದ ಸರ್ವೆ ನಂ. 201ರ ಮಧ್ಯೆ ಅದೇ ಗ್ರಾಮ ಸರ್ವೆ ನಂ. 184ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಗೊಗ್ಗದ ಸರ್ವೆ ನಂ. 181ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದೇ ನಂಬರಿನ ವಾಯುವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ನೈರುತ ದಿಕ್ಕಾಗಿ ಗೊಗ್ಗದ ಸರ್ವೆ ನಂ. 195ರ ಮಧ್ಯೆ ಗೊಗ್ಗ, ಹುಲಿಗಿಕಟ್ಟೆ ವ ಕೆಂಚಗೌಡನ ಕೊಪ್ಪ ಇವುಗಳ ಮೂರು ಎಲ್ಲೆ ಬಾಂದುಗಳು ಸೇರತಕ್ಕ ಸ್ಥಳಕ್ಕೆ ಹೋಗುತ್ತದೆ. ಆಮೇಲೆ ವಾಯುವ್ಯದಿಕ್ಕಾಗಿ ಕೆಂಚಗೌಡನ ಕೊಪ್ಪದ ಸರ್ವೆ ನಂ. 19ರ ಮಧ್ಯೆ ಅದೇ ಗ್ರಾಮದ ಸರ್ವೆ ನಂ. 9ರ ಕೇವಲ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಪಶ್ಚಿಮದಿಕ್ಕಾಗಿ ಅದೇ ಸರ್ವೆ ನಂ. 19ರ ಮಧ್ಯೆ ಕೆಂಚಗೌಡನಕೊಪ್ಪ ಗ್ರಾಮದ ಸರ್ವೆ ನಂ. 38ರ ಕೇವಲ ಉತ್ತರ ಮೂಲೆಯಲ್ಲಿ ಕೆಂಚಗೌಡನಕೊಪ್ಪಕ್ಕೂ ಮತ್ತು ಬೇಗೂರಿಗೂ ಮಧ್ಯೆ ಇರುವ ಎಲ್ಲೆ ಬಾಂದುಗಳಿಗೆ ಹೋಗುತ್ತದೆ.

ಪಶ್ಚಿಮಕ್ಕೆ.—ಆಮೇಲೆ ಜೋಡಿ ಬೇಗೂರು ಅಗ್ರಹಾರದ ಪೂರ್ವ ಎಲ್ಲೆಯ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸೀಮೆಯು ಶ್ರೀಮಂ॥ ಮಹಾರಾಜಾ ಸರ್ಕಾರದವರು, ಅಂತಾ ಸರಹದ್ದಿನೊಳಗಿರುವ ಯಾವ ಜವಿಾನಿನಲ್ಲಿ ಅಥವಾ ಜವಿಾನಿನ ಮೇಲಾದರೂ ಅಥವಾ ಅಂತಾ ಜವಿಾನಿನ ಯಾವ ಫಾರೆಸ್ಟು ಉತ್ಪತ್ತಿ ಮಾದರೂ ಯಾಪ ಮನುಷ್ಯನಿಂದಾಗಲಿ ನಮೂದಾಗುವ ಅಥವಾ ಅವನ ಪಕ್ಷವಾಗಿ ಇರುವದಾಗಿ ಹೇಳಿಕೊಳ್ಳುವ ಯಾವ ಹಕ್ಕುಗಳ ಇರುವಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತೀರ್ಮಾನಿಸಲು ಮತ್ತು ಮೇಲ್ಕಂಡ ರೆಗ್ಯುಲೇಷನಿನ IIನೆ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರವಾಗಿ ಅಮಲ್ ನಡಿಸಲು, ಫಾರೆಸ್ಟು ಅಸಿಸ್ಟೆಂಟ್ ಕ್ವಸರ್ವೇಟರಾದ ವೆ॥ ಬಿ. ರಾಮಸ್ವಾಮಿ ಅಯ್ಯರ್ ಯವರನ್ನು ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಾಗಿರಬೇಕೆಂದು ಮೊಕರರ್ರಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರಿಗೆ ಸಹಾಯ ಮಾಡಲು ತತ್ಕಾಲದ ಶಿವಮೊಗ್ಗ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರು ಸರ್ಕಾರದ ತರ್ಫಿನಲ್ಲಿ ಹಾಜರು ಇರಬೇಕೆಂತಲೂ ಆಜ್ಞಾಪಿಸಿರುತ್ತಾರೆ.

3. ಮತ್ತು ಸದರೀ ರಗ್ಯುಲೇಷನಿನ 15ನೆ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆಯು ಶ್ರೀಮಂ॥ ಮಹಾರಾಜಾ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಸೆಕ್ಷನ್‌ಗಳಿಂತೆ ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯುತಕ್ಕ ರೆವಿನ್ಯೂ ಇಲಾಖೆಯ ಆಫಿಸರಾಗಿರಬೇಕೆಂದು ತತ್ಕಾಲದ ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರನ್ನು ಮೊಕರರ್ರಾಡಿರುತ್ತಾರೆ.

ತಾರೀಖು 23ನೆ ನವೆಂಬರ್ 1903.

ನಂ. 342—3580, ಮೈಸೂರ ಸರ್ವಿಸ್ ರೆಗ್ಯುಲೇರ್ಷಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಫಾರೆಸ್ಟ್ ಅಸಿಸ್ಟೆಂಟ್ ಕ್ವಸರ್ವೇಟರಾದ ವೆ॥ ಕೆ. ಶಾಮಯ್ಯಂಗಾರ್ರಿಗೆ ಮಾಹೆ ಮಜಕೂರು 25ನೆ ತಾರೀಖಿನ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 1 ವಾರದ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಚಿತ್ರದುರ್ಗ ಡಿಸ್ಟ್ರಿಕ್ಟಿನ ಟ್ರಿಜರಿ ಅಸಿಸ್ಟೆಂಟ್ ಕಮಿಷನರವರು, ವೆ॥ ಶಾಮಯ್ಯಂಗಾರ್ರು ರಜಾದಲ್ಲಿರುವ ಕಾಲದಲ್ಲಿ, ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನ ಚಾರ್ಜನ್ನು ಇರತಕ್ಕದ್ದು.

ಹುಕುಂ ಬವೋಜೇಬ್,
ಎಂ. ಮುತ್ತಣ್ಣ,
ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಆಫೀಷಿಯೇಟಿಂಗ್ ಸೆಕ್ರಿಟೆರಿ.